ದಿನಾಂಕ: 20.04.2016ರಂದು ಡಾ|| ಕೇಶವಮೂರ್ತಿ ಆರ್. ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ ಇವರ ಅಧ್ಯಕ್ಷತೆಯಲ್ಲಿ ನಿರ್ದೇಶಕರ ಕೊಠಡಿಯಲ್ಲಿ ಬೆಳಿಗ್ಗೆ 11.00 ಗಂಟೆಗೆ ಜರುಗಿದ ಟೆಂಡರ್ ಆಹ್ವಾನ ಸಮಿತಿ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:

| | | |
|---|---|---|
| 1) | ಡಾ|| ಕೇಶವಮೂರ್ತಿ ಆರ್.<br>ನಿರ್ದೇಶಕರು<br>ನೆಫ್ರೋ-ಯುರಾಲಜಿ ಸಂಸ್ಥೆ. | ಅಧ್ಯಕ್ಷರು |
| 2) | ಡಾ|| ಉಮೇಶ ಎಲ್.<br>ವೈದ್ಯಕೀಯ ಅಧೀಕ್ಷಕರು<br>ನೆಫ್ರೋ-ಯುರಾಲಜಿ ಸಂಸ್ಥೆ. | ಸದಸ್ಯರು |
| 3) | ಡಾ|| ಆಶಾ ಎಸ್.<br>ಆಡಳಿತಾಧಿಕಾರಿಗಳು<br>ನೆಫ್ರೋ-ಯುರಾಲಜಿ ಸಂಸ್ಥೆ. | ಸದಸ್ಯ ಕಾರ್ಯದರ್ಶಿಗಳು |

ಸದಸ್ಯ ಕಾರ್ಯದರ್ಶಿಗಳು ಅಧ್ಯಕ್ಷರನ್ನು ಹಾಗೂ ಸದಸ್ಯರನ್ನು ಈ ಕೆಳಗೆ ನಮೂದಿಸಿರುವ ವಿಷಯಗಳಿಗೆ ಆಹ್ವಾನಿಸಿರುವ ಟೆಂಡರ್‌ನ ಪ್ರೀ-ಬಿಡ್ ಸಭೆಗೆ ಆಹ್ವಾನಿಸಿದರು.

1. ಸ್ಟೇಷನರಿ ವಸ್ತುಗಳ ಖರೀದಿ (Call II)
2. ಔಷಧಿಗಳು, ಡಿಸ್ಪೋಸಬಲ್ಸ್ ಹಾಗೂ ಇತರೆ ವಸ್ತುಗಳ ಖರೀದಿ (RC II)
3. ಎಸ್. ಎಸ್. ಪಿಜನ್ ಹೋಲ್ (Call II)
4. ಪೋಸ್ಟ್ ರೀನಲ್ ಟ್ರಾನ್ಸ್‌ಪ್ಲಾಂಟ್ ಡ್ರಗ್ಸ್
5. ಬಯೋ-ಮೆಡಿಕಲ್ ತ್ಯಾಜ್ಯ ವಿಲೇವಾರಿ

ಈ ಕೆಳಗೆ ನಮೂದಿಸಿರುವ ಸಂಸ್ಥೆಯವರು ಪ್ರೀ-ಬಿಡ್ ಸಭೆಯಲ್ಲಿ ಭಾಗವಹಿಸಿದ್ದರು. ಅವರು ಕೇಳಿದ ಪ್ರಶ್ನೆಗಳಿಗೆ ಸಮಿತಿಯು ನೀಡಿದ ವಿವರಣೆ:

1. **ಸ್ಟೇಷನರಿ ವಸ್ತುಗಳ ಖರೀದಿ (Call II)** :

| ಕ್ರ. ಸಂ. | ಸಂಸ್ಥೆಯ ಹೆಸರು/ಪ್ರತಿನಿಧಿ | ಪ್ರಶ್ನೆ | ಸ್ಪಷ್ಟೀಕರಣ |
|---|---|---|---|
| 1. | **ಮೆ॥ ಶ್ರೀ. ಸಾಯಿ ಅಸೋಸಿಯೇಟ್ಸ್**<br>ಶ್ರೀ. ಎಸ್. ಶ್ರೀನಿವಾಸುಲು | ಟೆಂಡರ್ ಫಾರ್ಮ್‌ನ ಟರ್ಮ್ಸ್ & ಕಂಡೀಷನ್ಸ್‌ನ ಕ್ರಮ ಸಂಖ್ಯೆ 4, "SSI Registration Certificate" ಈ ದಾಖಲೆ ತಯಾರಕ ಸಂಸ್ಥೆಗಳಿಗೆ ಮಾತ್ರವೇ ಅನ್ವಯಿಸುವುದರಿಂದ ಹಾಗೂ ಟೆಂಡರ್‌ನಲ್ಲಿ ನಮೂದಿಸಿರುವ ವಸ್ತುಗಳ ಸರಬರಾಜು ಮಾಡಲು "SSI Registration Certificate" ಅವಶ್ಯಕತೆ ಇಲ್ಲದೆ ಇರುವುದರಿಂದ ಅದನ್ನು ಸಲ್ಲಿಸಲು ವಿನಾಯಿತಿ ಕೋರಿದರು. | ಟೆಂಡರ್ ಫಾರ್ಮ್‌ನ ಟರ್ಮ್ಸ್ & ಕಂಡೀಷನ್ಸ್‌ನ ಕ್ರಮ ಸಂಖ್ಯೆ 4 ಕ್ಕೆ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಸಮಿತಿಯು ಸ್ಪಷ್ಟೀಕರಣ ನೀಡಿತು. |
| 2. | | ಟೆಂಡರ್ ಫಾರ್ಮ್‌ನ ಪುಟ ಸಂಖ್ಯೆ 6 ಟರ್ಮ್ಸ್ & ಕಂಡೀಷನ್ಸ್‌ನ "The agency/firm should submit the list of clients for whom suppliers are made" ಈ ದಾಖಲೆ ಸಲ್ಲಿಸುವ ಬಗ್ಗೆ. | ಈ ದಾಖಲೆಯು ಟೆಂಡರ್‌ನ ಕವರ್-I ದಾಖಲೆಗಳ ಮೌಲ್ಯಮಾಪನಕ್ಕೆ ಅವಶ್ಯಕವಾಗಿರುವುದರಿಂದ ಅದನ್ನು ಕಡ್ಡಾಯವಾಗಿ ಸಲ್ಲಿಸಬೇಕೆಂದು ಸಮಿತಿಯು ಸ್ಪಷ್ಟೀಕರಣ ನೀಡಿತು. |

2. **ಔಷಧಿಗಳು, ಡಿಸ್ಪೋಸಬಲ್ಸ್ ಹಾಗೂ ಇತರೆ ವಸ್ತುಗಳ ಖರೀದಿ (RC II)** :

| ಕ್ರ. ಸಂ. | ಸಂಸ್ಥೆಯ ಹೆಸರು/ಪ್ರತಿನಿಧಿ | ಪ್ರಶ್ನೆ | ಸ್ಪಷ್ಟೀಕರಣ |
|---|---|---|---|
| 1. | **ಮೆ॥ ನಿಶಾ ಫಾರ್ಮಾಸ್ಯುಟಿಕಲ್ಸ್** | ಔಷಧಿ ಪಟ್ಟಿಯ ಕ್ರಮ ಸಂಖ್ಯೆ 198 "Blood Tubings - Pediatrics" ಈ ವಸ್ತುವು single use ಅಥವಾ Multiple use | ಈ ವಸ್ತುವು single use ಎಂದು ಸಮಿತಿಯು ಸ್ಪಷ್ಟೀಕರಣ ನೀಡಿತು. |
| 2. | | ಔಷಧಿ ಪಟ್ಟಿಯ ಕ್ರಮ ಸಂಖ್ಯೆ 266 **"Syringe with Needle Without Luer Lock Disposable 50ml"** ಈ ವಸ್ತುವಿಗೆ Needle ಗಳು ಬರುವುದಿಲ್ಲವೆಂದು ತಿಳಿಸಿದರು. | ಔಷಧಿ ಪಟ್ಟಿಯ ಕ್ರಮ ಸಂಖ್ಯೆ 266 ನ್ನು **"Syringe Without Luer Lock Disposable 50ml"** ಎಂದು ಓದಿಕೊಳ್ಳುವಂತೆ ಸ್ಪಷ್ಟೀಕರಣ ನೀಡಿತು. |

| | | | |
|---|---|---|---|
| 3 | | ಔಷಧಿ ಪಟ್ಟಿಯ ಕ್ರಮ ಸಂಖ್ಯೆ 241<br>"Hand Sanitisor- Containing Alcohol (Ethyl/ Propyl) 60-90% + Qunternary Ammonium Compound Gel based 500ml-/Plastic bottles with dispenser" | ಔಷಧಿ ಪಟ್ಟಿಯ ಕ್ರಮ ಸಂಖ್ಯೆ 241ನ್ನು ಈ ಕೆಳಕಂಡಂತೆ ಓದಿಕೊಳ್ಳುವಂತೆ ಸಮಿತಿಯು ಸ್ಪಷ್ಟೀಕರಣ ನೀಡಿತು.<br>"Hand Sanitisor- Containing Alcohol (Ethyl/ Propyl) 60-90% + Qunternary Ammonium Compound aqueous based 500ml-/Plastic bottles with dispenser" |
| 4 | **<u>ಮೆ॥ ಮಾರುತಿ ಫಾರ್ಮಾ</u>**<br>ಶ್ರೀ. ಮಹೇಶ್ | ಸಂಸ್ಥೆಯ ಪ್ರತಿನಿಧಿಯು ಹಿಂದಿನ ಟೆಂಡರ್‌ಗೆ ಪಡೆಯಲಾಗಿದ್ದ " No Conviction Certificate" ನ್ನು ಈಗ ಕರೆಯಲಾದ ಟೆಂಡರ್‌ಗೂ ಸಲ್ಲಿಸಬಹುದೆ ಎಂದು ಕೇಳಿದರು. | ಈಗ ಆಹ್ವಾನಿಸುವ ಟೆಂಡರ್‌ನಲ್ಲಿ ಭಾಗವಹಿಸಲು ಹೊಸದಾಗಿ " No Conviction Certificate" ನ್ನು ಪಡೆದು ಸಲ್ಲಿಸಬೇಕು ಎಂದು ಸಮಿತಿಯು ಸ್ಪಷ್ಟೀಕರಣ ನೀಡಿತು. |

3. **<u>ಎಸ್. ಎಸ್. ಪಿಜನ್ ಹೋಲ್ (Call II)</u> :**

| | | | |
|---|---|---|---|
| 5 | **<u>ಮೆ॥ ಶಿವಾನ್ ಇಂಡಿಯಾ</u>**<br>ಶ್ರೀಮತಿ ಕೋಕಿಲಾ ಎಂ. | ಸಂಸ್ಥೆಯ ಪ್ರತಿನಿಧಿಯು ಹಿಂದಿನ ಟೆಂಡರ್‌ಗೆ ಪಡೆಯಲಾಗಿದ್ದ "Solvency certificate" ನ್ನು ಈಗ ಕರೆಯಲಾದ ಟೆಂಡರ್‌ಗೂ ಸಲ್ಲಿಸಬಹುದೆ ಎಂದು ಕೇಳಿದರು. | ಈಗ ಆಹ್ವಾನಿಸುವ ಟೆಂಡರ್‌ನಲ್ಲಿ ಭಾಗವಹಿಸಲು ಹೊಸದಾಗಿ " Solvency certificate" ನ್ನು ಪಡೆದು ಸಲ್ಲಿಸಬೇಕು ಎಂದು ಸಮಿತಿಯು ಸ್ಪಷ್ಟೀಕರಣ ನೀಡಿತು. |

4. **<u>ಪೋಸ್ಟ್ ರೀನಲ್ ಟ್ರಾನ್ಸ್‌ಪ್ಲಾಂಟ್ ಡ್ರಗ್ಸ್</u> :**

ಮೇಲ್ಕಂಡ ಟೆಂಡರ್‌ಗೆ ಸಂಬಂದಪಟ್ಟಂತೆ ಪ್ರೀ-ಬಿಡ್ ಸಭೆಗೆ ಯಾವುದೇ ಸಂಸ್ಥೆಯವರು ಹಾಜರಾಗಲಿಲ್ಲ.

5. **<u>ಬಯೋ-ಮೆಡಿಕಲ್ ತ್ಯಾಜ್ಯ ವಿಲೇವಾರಿ</u> :**

ಮೇಲ್ಕಂಡ ಟೆಂಡರ್‌ಗೆ ಸಂಬಂದಪಟ್ಟಂತೆ ಪ್ರೀ-ಬಿಡ್ ಸಭೆಗೆ ಯಾವುದೇ ಸಂಸ್ಥೆಯವರು ಹಾಜರಾಗಲಿಲ್ಲ.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ನಿರ್ದೇಶಕರು,
ನೆಫ್ರೋ-ಯುರಾಲಜಿ ಸಂಸ್ಥೆ,
ಬೆಂಗಳೂರು.